Docs 58
T-P-2

Regd No BG 155 25-8-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ವಿಜಯವಾಡಾದಲ್ಲಿ ನಾಸ್ತಿಕರ ಸಮ್ಮೇಳನ

ಕೆಳಗಿಳಿಯಿರಿ

ನವದೆಹಲಿ— ದೇಶಭಕ್ತಿ ಮತ್ತು ಯಶಸ್ವೀ ನೆಹ್ರೂ ಸಂಪ್ರದಾಯದ ಹೆಸರಿನಲ್ಲಿ ಅಧಿಕಾರ ಬಿಟ್ಟು ಕೆಳಗೆಳಿಯಿರಿ, ಎಂದು ಪ್ರಧಾನಿ ನೆಹರೂರಿಗೆ ಪಾರ್ಲಿಮೆಂಟು ಸದಸ್ಯೆ ಶ್ರಿಮತಿ ತಾರಕೇಶ್ವರಿ ಸಿನ್ಹಾ ಬರೆದಿರುವರು.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ.ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವಪೆಂದು ತಕ್ಕಜ್ಞತಾಪೂರ್ವಕವಂದಿಸುತ್ತೇನೆ.

ಸಂಪಾದಕ 'ಸತ್ಯವಾದಿ'
ಚಾಮರಾಜೇಂದ್ರ. ಮೈಸೂರು 4

ಮುಖ್ಯ ಮಂತ್ರಿಗಳ ಭರವಸೆ

ಬೆಂಗಳೂರು— ಮೈಸೂರು ಮೆಡಿಕಲ್ ಅಸೋಸಿಯೇಷನ್ನಿನ ಅಸ್ತಿಭಾರ ಶಿಲೆ ಸ್ಥಾಪಿಸುತ್ತಾ, ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು, ತುರ್ತು ಸಂಬಳ ಆಯೋಗದ ಸೂಚನೆಯಲ್ಲಿ ಇವರ ಸೇವಾ ನಿಯಮಗಳನ್ನು ಉತ್ತಮಗೊಳಿಸಲು ಸರಿಯಾದ ಕಾರ್ಯಕ್ರಮ ಕೈಗೊಳ್ಳಲಾಗುವುದೆಂದು ಹೇಳಿದರು.

●

ಇಂದಿರಾರ ನಿಲುವು

ನವದೆಹಲಿ— ಕಾಂಗ್ರೆಸ್ ಪಾರ್ಟಿಯ ತತ್ವಗಳು, ಕಾರ್ಯಕ್ರಮಗಳು, ನೀತಿಗಳಿಗೆ ನಷ್ಟವಾಗುವ ಸಂದರ್ಭದಲ್ಲಿ ತಾವು ಐಕ್ಯತೆಗೆ ಅಥವಾ ರಾಜಿಗೆ ಸಿದ್ಧವಿಲ್ಲವೆಂದು ಪ್ರಧಾನಿ ಇಂದಿರಾ ಹೇಳಿದರು.

★

ಪ್ರಧಾನಿಗೆ ಬೆಂಬಲ

ನವದೆಹಲಿ— ಶ್ರೀ ಸಂಜೀವಯ್ಯನವರ ಮನೆಯಲ್ಲಿ ಸೇರಿದ್ದ 248 ಪಾರ್ಲಿಮೆಂಟಿನ ಕಾಂಗ್ರೆಸ್ ಸದಸ್ಯರು ಇಂದಿರಾ ಗಾಂಧಿಯವರ ನಾಯಕತ್ವದಲ್ಲಿ ವಿಶ್ವಾಸ ವ್ಯಕ್ತ ಪಡಿಸಿದರು.

●

ಚಾಮರಾಜರಿಗೆ ಕಪ್ಪು ಬಾವುಟ

ಮಧುರೈ— ಕಾಮರಾಜರು ಭಾನುವಾರ ಬಂದಾಗ, ಕಾಂಗ್ರೆಸಿಗರೆಂದು ಹೇಳಲಾದ 50 ಮಂದಿ ಕಪ್ಪು ಬಾವುಟ ಪ್ರದರ್ಶಿಸುತ್ತಾ ' ಸಮಾಜವಾದ ಶತ್ರು ಹಿಂದಕ್ಕೆ ಹೋಗು " ' ಸಿಂಡಿಕೇಟ್‌ಗೆ ಧಿಕ್ಕಾರ' " ಜೈ ಇಂದಿರಾ ಗಾಂಧಿ " ಎಂದು ಘೋಷಿಸಿದರು.

● ಮೈಸೂರು— ನಿನ್ನೆ ರೇಸಿನಲ್ಲಿ ಜಾಕ್ ಪಾಟ್ ಪೂಲಿನಲ್ಲಿ 8 ಟಿಕೀಟುಗಳಿಗೆ ತಲಾ ರೂ 5820 ದೊರೆಯಿತು.

ನಾಲ್ಕನೇ ರಾಷ್ಟ್ರಾಧ್ಯಕ್ಷರು

ನವದೆಹಲಿ— 75 ವರ್ಷದ ಶ್ರೀ ವರಹಾಗಿರಿ ವೆಂಕಟಗಿರಿಯವರು ನಿನ್ನೆ ಪಾರ್ಲಿಮೆಂಟು ಭವನದಲ್ಲಿ ಜಾಜ್ವಲ್ಯಮಾನ ಸಮಾರಂಭದಲ್ಲಿ ಭಾರತದ ನಾಲ್ಕನೆ ರಾಷ್ಟ್ರಾಧ್ಯಕ್ಷರಾಗಿ ಪ್ರತಿಷ್ಟಿಸಲ್ಪಟ್ಟರು – ಗಿರಿಯವರು ಇಂಗ್ಲೀಷಿನಲ್ಲಿ ಭಾರಣಮಾಡಿದರು – ಸಾಂಪ್ರದಾಯಕ ಸಾರೊಟಿನಲ್ಲಿ ಮೆರವಣಿಗೆಯಲ್ಲಿ ಪಾರ್ಲಿಮೆಂಟು ಭವನಕ್ಕೆ ಬರುವಾಗ ನಂ. 5 ಪಾರ್ಲಿಮೆಂಟು ಭವನದ ದಹತ್ತಿರ ಬಂದಾಗ ಪ್ರಧಾನಿ ಇಂದಿರಾರು ಸ್ವಾಗತಿಸಿದರು – ಹಂಗಾಮಿ ಶ್ರೇಷ್ಟ ನ್ಯಾಯಾಧೀಶರ ಸಮ್ಮುಖದಲ್ಲಿ ಶ್ರೀ ಗಿರಿಯವರು ಪ್ರಮಾಣವಚನ ಸ್ವೀಕರಿಸಿದರು – 31 ಕುಶಾಲ ತೋಪುಗಳು ಹಾರಿಸಲ್ಪಟ್ಟವು – ರಾಷ್ಟ್ರಗೀತಾನಂತರ ಸಾಂಪ್ರದಾಯಕ ಮೆರವಣಿಗೆಯಲ್ಲಿ ಅಧ್ಯಕ್ಷರು ಹೊಂಟರು.

★

ನಾಸ್ತಿಕರ ಸಮ್ಮೇಳನ

ವಿಜಯವಾಡ— ಅಖಿಲ ಭಾರತ ನಾಸ್ತಿಕರ ಸಮ್ಮೇಳನವು ಮುಂದಿನ ಫೆಬ್ರವರಿಯಲ್ಲಿ ಇಲ್ಲಿ ನಡೆಯುವದು.

★

ರೇಸ್ ಸ್ಪೆಷಲ್ ರೈಲು

ಮೈಸೂರು— ಇಲ್ಲಿನ ರೇಸಿಸ್‌ಗೆ ಬೆಂಗಳೂರಿನಿಂದ ಬರುವವರ ಅನುಕೂಲಕ್ಕಾಗಿ ಬೆಂಗಳೂರು ಸಿಟಿ ಸ್ಟೇಷನ್ನಿನಿಂದ ಮೈಸೂರಿಗೆ ಸ್ಪೆಷಲ್ ರೈಲು ಬಿಡಲು ರೈಲ್ವೇ ಅಧಿಕಾರಿಗಳು ಸಮ್ಮತಿಸಿರುವರು. ತಾ.27 ಬುಧವಾರ ಬೆಂಗಳೂರಿಂದ ಬೆಳಿಗ್ಗೆ 8.50 ಕ್ಕೆ ರೈಲು ಹೊರಡುವುದು.

★

ಇಜ್ಮೀರ್ ವಿಶ್ವಮೇಳ

ನವದೆಹಲಿ— ಮೂರು ದಿನಗಳ ಹಿಂದೆ ಆರಂಭವಾದ ಇಜ್ಮೀರ್ ವಿಶ್ವಮೇಳದಲ್ಲಿ ಭಾರತೀಯ ಪ್ರದರ್ಶನ ಮಂದಿರದ ಗಾಂಧೀಜಿ ವಿಭಾಗ ಅನೇಕ ಸಂದರ್ಶಕರ ಗಮನ ಸೆಳೆದಿದೆ.

ಪೌರಸಭಾ ಯೋಜನೆ

ಮೈಸೂರು— ಪೌರಸಭೆಯ ಶತಮಾನೋತ್ಸವದ ಗುರುತಾಗಿ ರೂ 20000 ದಲ್ಲಿ ಮೈಸೂರು ನಗರದ ಸಾಕ್ಷ್ಯ ಚಿತ್ರ ತಯಾರಿಸಲು ಯೋಜಿಸಲಾಗಿದೆ – ಗಾಂಧಿ ಶತಮಾನೋತ್ಸವ ಕಾಲದಲ್ಲಿ ರೂ 5 ಸಾವಿರದ ,ರೋಲಿಂಗ್ ಶೀಲ್ಡಿನ ಫುಟ್ ಬಾಲ್ ಅಥವಾ ಬ್ಯಾಸ್ಕೆಟ್ ಬಾಲ ಪಂಥ ನಡೆಸಲೂ ಇಚ್ಛಿಸಲಾಗಿದೆ.

★

ಶ್ರೀ ಗಿರಿಯವರು

ನವದೆಹಲಿ— ಶನಿವಾರ ಸಂಜೆ ಶ್ರೀ ಗಿರಿಯವರು ಸಂಸಾರ ಸಮೇತ ರಾಷ್ಟ್ರಪತಿ ಭವನಕ್ಕೆ ಆಗಮಿಸಿದಾಗ ಅಧಿಕೃತ ಪುರೋಹಿತನು ಋಗ್ವೇದ ಯಜುರ್ವೇದ ಮಂತ್ರ ಪಠಿಸಿ, ಅಧ್ಯಕ್ಷರಿಗೆ ವಿಜಯ, ಸೌಖ್ಯ, ದೀರ್ಘಾಯುಗಳಿಗೂ, ದೇಶಕ್ಕೆ ಶಾಂತಿ ಅಭ್ಯುದಗಳಿಗೂ ಶುಭ ಕೋರಿದರು.

●

ನೀರಿನ ತಾಪತ್ರಯ

ತಿರುಪತಿ – ನೀರಿನ ತೀವ್ರ ಅಭಾವಕ್ಕಾಗಿ ಇಲ್ಲಿ ಕಟ್ಟಡ ನಿರ್ಮಾಣಗಳು ನಿಲ್ಲಿಸಲಾಗಿವೆ – ಮಳೆಗಾಗಿ ವರುಣ ಜಪ ನಡೆಸಲು ಏರ್ಪಾಡುಗಳು ನಡೆಯುತ್ತಿವೆ.

★

ಕಾರ್ಯಕಾರಿ ಸಮಿತಿ

ನವದೆಹಲಿ— ಶಿಸ್ತು ಜಾರಿಗೂ, ಶಿಸ್ತು ಕೂಡದಕ್ಕೂ ಕಾಂಗ್ರೆಸ್ ತಂಡಗಳಲ್ಲಿ ಕಹಳೆ ಊದು ಜೋರಾಗಿರುವಾಗ, ಇಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಬರ್ಚಿಸಲಿದೆ.

★

ಜನಸಂಘಕ್ಕೆ ಸಂತೋಷ

ನವದೆಹಲಿ— ಇಂದಿರಾ ಗಾಂಧಿಯವರು ಪ್ರಧಾನಿ ಪದವಿಯಿಂದ ತೆಗೆಯಲ್ಪಟ್ಟರೆ ಜನಸಂಘಕ್ಕೆ ಸಂತೋಷವೆಂದು ಅಧ್ಯಕ್ಷ ವಾಜಪೇಯಿ ಹೇಳಿದರು.

ಬಾಲ್ಯವಿವಾಹಗಳು

ಭಾರತದ ಸುಪುತ್ರರೂ, ಪರಮಪೂಜನೀಯರೂ ಆದ ಶ್ರೀ ರಾಮಕೃಷ್ಣರು 6 ವರ್ಷದ ಬಾಲಕಿಯನ್ನೂ, ಸಮಾಜ ಸುಧಾರಕರೂ ದೇಶಭಕ್ತರೂ ನ್ಯಾಯಶಾಸ್ತ್ರವೇತ್ತರೂ ಆದ ಮಹದೇವ ಗೋವಿಂದ ರಾನಡೆಯವರು 8 ವರ್ಷದ ಹುಡುಗಿಯನ್ನೂ ಪ್ರಸಿದ್ಧ ಸಮಾಜ ಸುಧಾರಕರೂ ಮುಖ್ಯವಾಗಿ ಸ್ತ್ರೀಯರ ಪೇಲ್ಕೆಗಾಗಿ ಯಾವ ಜೀವನವನ್ನೂ ಶ್ರಮಿಸಿದವರೂ ಶಿಕ್ಷಣಶಾಸ್ತ್ರವೇತ್ತರೂ ಆದ ಭಾರತರತ್ನ ಧೋಂಡೋ ಕೇಶವ ಕರ್ವೆಯವರು 9 ವರ್ಷದ ಬಾಲಕಿಯನ್ನು ವಿವಾಹವಾದದ್ದೂ, ಮಹಾತ್ಮಾ ಗಾಂಧಿಯವರು 10 ವರ್ಷದ ಬಾಲಕಿಯನ್ನು ಮದುವೆಯಾದದ್ದೂ. ಬಾಲ್ಯವಿವಾಹವು ಘನತೆಯನ್ನು ಸೂಚಿಸುವ ಒಂದು ಸಂಕೇತವಾಗಿತ್ತೆಂಬುದಕ್ಕೆ ನಿದರ್ಶನಗಳು.

★

ಗಾಂಧೀಜೀ ಅನ್ಮತವಾಣಿ

ಸತ್ಯವು ಯಾವುದೇ ಒಂದು ಧರ್ಮಗ್ರಂಥದ ವ್ಯಾವರ್ತಕ ಸೊತ್ತಲ್ಲ.

ನಮ್ಮ ದೇಶದ ಬಹಳಷ್ಟು ಪ್ರಜೆಗಳು ಕೂಡಿ ಈಜಲು ಅಥವಾ ಮುಳುಗಲು ನಿಶ್ಚಯಿಸಿದಲ್ಲಿಗಲೇ ನಾವು ನಿಜವಾಗಿ ಸ್ವತಂತ್ರರಾಗುವೆವು.

ನಮ್ಮ ಮುಂದಿನಸಗಳು ಕೆಚ್ಚೆದೆಯವರೂ ತಾಳ್ಮೆಯುಳ್ಳವರೂ, ಅಂಜಿಕೆ ಇಲ್ಲದವರೂ, ಹೆಚ್ಚಾಗಿ ಆತ್ಮತ್ಯಾಗ ಮಾಡಬಲ್ಲವರೂ ಆಗಬೇಕು.

ಜನರ, ಜದರಿಂದ ಮತ್ತು ಜನತೆಗಾಗಿ ಇರುವ ಸರಕಾರ, ಒಬ್ಬ ಮನುಷ್ಯನ ಆವಶ್ಯಕತೆಗೇ ದೊಡ್ಡವನಾಗಿರಲಿ, ಅಜ್ಞೆಗೆ ಅನುಗುಣವಾಗಿ ನಡೆಯಲಾರದು.

ನನ್ನ ದೃಷ್ಟಿಯಲ್ಲಿ ಪ್ರಜಾಸತ್ತೆಯಲ್ಲಿ ಅತ್ಯಂತ ದುರ್ಬಲನಿಗೂ ಅತ್ಯಂತ ಬಲಶಾಲಿಗೆ ಇರುವಷ್ಟೆ ಸಮಾನ ಅವಕಾಶ ಇರಬೇಕು.

ಅಹಿಂಸೆ ಮತ್ತು ಸತ್ಯ ಇವು ಬೇರೆನ್ನೊಂದು ಎಷ್ಟರಮಟ್ಟಿಗೆ ಹತ್ತಿಕೊಂಡಿವೆ ಎಂದರೆ, ಅವುಗಳನ್ನು ಬೇರೆಬೇರೆ ಮಾಡಲು ಸಾಧ್ಯವೇ ಇಲ್ಲ ; ಅವು ಒಂದೇ ನಾಣ್ಯದ ಇಬ್ಬದಿಯ ಮುಖಗಳು.

Golden Jubilee of 'Satyavadi'

The golden jubilee of the 'Satyavadi' is to be celebrat very soon.

The President, the Prime Minister, H H. the Maharaja Mysore, and other personages have extended messages of felicitations and good wishes. Sri Sringeri and Sri Dwarak Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah Sri Madhav Shenoi Sri Opera Talkies, Padmabhushana Dr. M.C. Modi, Dr. R S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervenily solicited with grateful thanks.

Editor, 'Satyavadi' Chamarājapuram, Mysore 4.

ಜಯಪ್ರದ 5 ನೇ ವಾರ

ವುಡ್‌ಲಾಂಡ್ ಶಿನಿಮಾ

— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಇಂತಕಾಮ್ INTAQAM

ಪಾತ್ರ– ಸಂಜಯ್, ಸಾಧನ, ರಾಜೇಂದ್ರನಾಥ್, ಹೆಲೆನ್
ರಹೆಮಾನ್, ಅಶೋಕುಮಾರ್
ಸಂಗೀತ : ಲಕ್ಷ್ಮೀಕಾಂತ್ – ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಅಪೆರಾ— ಅಮೋಘ 2 ನೇ ವಾರ

ಅಮೋಘ ಆಕರ್ಷಣೀಯ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್

ಸಪ್‌ನೋನ್ ಕ ಸೌದಾಗರ್

ನಟವರ್ಗ— ರಾಜಕಪೂರ್, ಹೇಮಮಾಲಿನಿ
ಸಂಗೀತ : ಶಂಕರ್ ಜೈಕಿಷನ್
ದಿನ 3 ಆಟಗಳು

Quality Printing — Neat Binding

Lakshminarasimha Press

Sivarampet, Mysore

Help The Gorakshana



ಗೋರಕ್ಷಣೆ ಮಾಡಿ, ಪ್ರಾಣಿದಯಾ-ಕಾರ್ಯಕರ್ತರಿಗೆ ಹೆಚ್ಚಿನ ಸಹಾಯ ನೀಡಿರಿ
ಗೋರಕ್ಷಣೆಗೆ ಬೆಂಬಲ ನೀಡಿ

Protect the Cow

SHAKTI SUDHA

A Superb Tonic

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4